

ಮಗುವನ್ನು ಹೊತ್ತ ತಂದೆ ನದಿಯನ್ನೇನೋ ದಾಟಬಹುದು; ಆದರೆ ಅಮೆರಿಕದ ಬಿಗಿಪಹರೆಯನ್ನು ದಾಟಿಕೊಂಡು ಬದುಕು ಕಟ್ಟಿಕೊಳ್ಳಬಲ್ಲನೇ?

**2019**ರ ಸಾಲಿನ ಪ್ರತಿಷ್ಠಿತ ಪುಲಿಟ್ಜರ್ ಪ್ರಶಸ್ತಿಗಳು ಪ್ರಕಟಗೊಂಡಿವೆ. ‘ಬ್ರೇಕಿಂಗ್ ನ್ಯೂಸ್ ಫೋಟೊಗ್ರಫಿ’ ವಿಭಾಗದಲ್ಲಿ ರಾಯಿಟರ್ಸ್ ಸಿಬ್ಬಂದಿಯ ಛಾಯಾಚಿತ್ರಗಳನ್ನು ಪ್ರಶಸ್ತಿಗೆ ಗುರ್ತಿಸಲಾಗಿದೆ. ಈ ಚಿತ್ರಗಳು ತಮ್ಮ ಸೌಂದರ್ಯದಿಂದ ಅಥವಾ ಛಾಯಾಗ್ರಹಣಕ್ಕೆ ಸಂಬಂಧಿಸಿದ ಅತ್ಯುತ್ತಮ ಗುಣಲಕ್ಷಣಗಳಿಂದ ಮನ್ನಣೆಗೆ ಪಾತ್ರವಾಗಿಲ್ಲ. ಈ ಚಿತ್ರಗಳ ಹಿಂದಿರುವುದು ಛಾಯಾಗ್ರಹಣದ ವ್ಯಾಕರಣಕ್ಕಿಂತಲೂ ಮಿಗಿಲಾಗಿ, ವರ್ತಮಾನದ ದುರಿತಗಳು ಹಾಗೂ ಮಾನವೀಯ ಕ್ಷಣಗಳು. ‘ಎಲ್ಲೋ ಮಗು ಅಳುತಾ ಇದೆ’ ಎಂದು ನಮ್ಮ ಕವಿ ಜಿ.ಎಸ್. ಶಿವರುದ್ರಪ್ಪ ಉದ್ಗರಿಸಿದ್ದರಲ್ಲ ಅಂಥ ಅಳುವಿನ ಅಲೆಯೊಂದು ಇಲ್ಲಿನ ಪ್ರತಿ ಛಾಯಾಚಿತ್ರದಲ್ಲೂ ಅಂತರ್ಗತವಾಗಿದೆ.

ಮಧ್ಯ ಅಮೆರಿಕದಲ್ಲಿ ಕಳೆದ ಕೆಲವು ವರ್ಷಗಳಿಂದ ಪ್ರಕ್ಷುಬ್ಧ ಪರಿಸ್ಥಿತಿ ನೆಲೆಗೊಂಡಿದೆ. ಒಂದೆಡೆ ಕಿತ್ತು ತಿನ್ನುವ ಬಡತನದ ತಿವಿತ, ಇನ್ನೊಂದೆಡೆ ಗುಂಪು ಘರ್ಷಣೆಯ ಅಲಗು, ಹುಟ್ಟಿದ ನೆಲದಲ್ಲಿ ಬದುಕುವ ಭರವಸೆಗಳೆಲ್ಲ ಹುಸಿಗೊಂಡಾಗ ಜನರ ಪಾಲಿಗೆ ಉಳಿಯುವುದು ಒಂದೇ ಆಯ್ಕೆ ವಲಸೆ.

ಎಲ್ ಸಾಲ್ವಡೊರ್, ಗ್ವಾಟೆಮಾಲಾ ಮತ್ತು ಹೊಂಡುರಾಸ್ ಪ್ರದೇಶಗಳ ಸಾವಿರಾರು ನಿರ್ಗತಿಕರು ವಲಸೆ ಹೊರಟಿದ್ದಾರೆ. ತಾಯ್ನಾಡನ್ನು ತೊರೆದು ನಾಳೆಗಳನ್ನು ಹುಡುಕಿಕೊಂಡು ಹೊರಟ ಎಲ್ಲರದೂ ಒಂದೇ ಗುರಿ ಹೇಗಾದರೂ ಮಾಡಿ ಅಮೆರಿಕದೊಳಕ್ಕೆ ಸೇರಿಕೊಳ್ಳುವುದು. ಆದರೆ, ಭದ್ರತಾ ಸಿಬ್ಬಂದಿಯ ಕಣ್ಣುತಪ್ಪಿಸಿ ಅಮೆರಿಕದೊಳಗೆ ನುಸುಳುವುದು ಅಷ್ಟು ಸುಲಭವೇ? ಹೀಗೆ ನುಸುಳುವುದಕ್ಕೂ ಒಂದು ವ್ಯವಸ್ಥೆಯಿದೆ. ರಿಯೊ ಗ್ರಾಂಡೆ ಎನ್ನುವ ನದಿಯ ಮಧ್ಯಭಾಗದಲ್ಲಿ ಅಮೆರಿಕ ಮತ್ತು ಮೆಕ್ಸಿಕೊಗಳ ಗಡಿರೇಖೆಯಿದೆ. ಈ ಗಡಿಪ್ರದೇಶದಲ್ಲಿ, ನದಿಯಲ್ಲಿ ಆಳ ಕಡಿಮೆ ಇರುವ ಪ್ರದೇಶಗಳನ್ನು ಗುರ್ತಿಸಲಾಗುತ್ತದೆ. ಈ ಪ್ರದೇಶದಲ್ಲಿ ತೆಪ್ಪಗಳ ಮೂಲಕ ವಲಸಿಗರನ್ನು ಅಮೆರಿಕ ಭಾಗಕ್ಕೆ ಅಕ್ರಮವಾಗಿ ಸಾಗಿಸಲಾಗುತ್ತದೆ. ಈ ಅಕ್ರಮ ಸಾಗಣೆಯನ್ನೇ ದಂಧೆಯನ್ನಾಗಿಸಿಕೊಂಡ ಕಳ್ಳಸಾಗಣೆದಾರರ ಗುಂಪುಗಳು ರೂಪುಗೊಂಡಿವೆ.

ಅಮೆರಿಕದೊಳಗೆ ನುಸುಳಿದ ನಂತರ ಅಲ್ಲೇನೂ ಬದುಕು ಸಲೀಸಲ್ಲ. ಅಕ್ರಮವಾಗಿ ದೇಶ ಪ್ರವೇಶಿಸಿದವರು ಸಿಕ್ಕಿಬಿದ್ದರೆ ಸುದೀರ್ಘ ಕಾನೂನು ಕ್ರಮ ಎದುರಿಸಬೇಕಾಗುತ್ತದೆ. ಈ ನಿರ್ಗತಿಕರ ಬಗ್ಗೆ ಅಮೆರಿಕನ್ನರೇನೂ ಉದಾರಿಗಳಾಗಿಲ್ಲ. ಅದು ಬೇರೆಯದೇ ಕಥೆ. ಅಮೆರಿಕದಲ್ಲಿ ಹೇಗಾದರೂ ಏಗಿ ಅನ್ನ ಸಂಪಾದಿಸಿಕೊಳ್ಳೋಣ ಎಂದು ವಲಸೆ ಆರಂಭವಾಗುತ್ತದಲ್ಲ ಆ ಪಯಣದ್ದೇ ಒಂದು ರೋಚಕ ಹಾಗೂ ದಾರುಣ ಕಥೆ. ಗುರಿ ಮುಟ್ಟುವ ಕುರಿತು ನಂಬಿಕೆಯಿಲ್ಲದಿದ್ದರೂ ಕೈಗೊಳ್ಳುವ ಮಹಾನ್ ಪಯಣವದು. ದಾರಿಯಲ್ಲಿನ ಸಂಕಟಗಳು, ಭದ್ರತಾ ಸಿಬ್ಬಂದಿಯ ಕಣ್ಣು ತಪ್ಪಿಸಿ ನಡೆಯುವ ಸಾಹಸ, ಕಿತ್ತು ತಿನ್ನುವ ಹಸಿವು, ಮಕ್ಕಳು ಮಹಿಳೆಯರು ವೃದ್ಧರ ಅಸಹಾಯಕತೆ, ಜೀವ ಬಾಯಿಗೆ ಬರಲು ಇನ್ನೇನು ಬೇಕು? ಈ ಮಹಾನ್ ನಡಿಗೆಯ ಕ್ಷಣಗಳನ್ನು ದಾಖಲಿಸಿರುವ ರಾಯಿಟರ್ಸ್ ಸಾಧಕರ ಪಯಣಕ್ಕೆ ಈಗ ಪುಲಿಟ್ಜರ್ ಗೌರವ ಸಂದಿದೆ.

ವಲಸೆ ಪ್ರಕ್ರಿಯೆಯನ್ನು ದಾಖಲಿಸಲು ರಾಯಿಟರ್ಸ್ ಸಂಸ್ಥೆಯ ಹನ್ನೊಂದು ಛಾಯಾಗ್ರಾಹಕರು ಪಟ್ಟಿರುವ ಶ್ರಮ ಅಷ್ಟಿಷ್ಟಲ್ಲ. ವಲಸಿಗರೊಂದಿಗೆ ತಾವೂ ನಡೆದಿದ್ದಾರೆ, ದಣಿದಿದ್ದಾರೆ, ಹಸಿವನ್ನು ಅನುಭವಿಸಿದ್ದಾರೆ, ಸಾವುನೋವಿನ ಕ್ಷಣಗಳಿಗೆ ಕಣ್ಣಾಗಿದ್ದಾರೆ, ಕಣ್ಣೀರು ತುಂಬಿಕೊಂಡಿದ್ದಾರೆ, ಕಣ್ಣೊರೆಸಿಕೊಂಡು ಕರ್ತವ್ಯ ನಿರ್ವಹಿಸಿದ್ದಾರೆ. ಈ ಪಯಣದಲ್ಲಿ ವೃತ್ತಿಪರತೆ ಹಾಗೂ ಮಾನವೀಯತೆ ಎರಡನ್ನೂ ಉಳಿಸಿಕೊಳ್ಳಲು ಹಂಬಲಿಸಿ ಹೈರಾಣಾಗಿದ್ದಾರೆ.

ಸ್ಪರ್ಧೆಯಲ್ಲಿ ಗುರ್ತಿಸಲಾದ ಇಪ್ಪತ್ತು ಛಾಯಾಚಿತ್ರಗಳಲ್ಲಿ ಒಂಬತ್ತನ್ನು ದಾಖಲಿಸಿದ ರಾಯಿಟರ್ಸ್ ಬಳಗದ ಲತೀಫ್, ಐದು ತಿಂಗಳ ಕಾಲ ಗಡಿಪ್ರದೇಶದಲ್ಲಿ ಉಳಿದು ವಲಸೆಯ ಕ್ಷಣಗಳಿಗೆ ಸಾಕ್ಷಿಯಾಗಿದ್ದರು. (2008ರಲ್ಲೂ ಅವರು ಪುಲಿಟ್ಜರ್ ಪ್ರಶಸ್ತಿಗೆ ಪಾತ್ರರಾಗಿದ್ದರು. ಲತೀಫ್ ಹಾಗೂ ಸಂಗಡಿಗರು ನೂರಾರು ಮೈಲಿಗಳನ್ನು ಕಾಲ್ನಡಿಗೆಯಲ್ಲಿಯೇ ಸವೆಸಿದ್ದಾರೆ. ತಂದೆಯೊಬ್ಬ ತನ್ನ ಐದು ವರ್ಷದ ಮಗನನ್ನು ಒಂದು ಕೈಯಲ್ಲಿ ಹಿಡಿದುಕೊಂಡು ಎದೆಮಟ್ಟದ ನೀರಲ್ಲಿ ನದಿ ಸಾಗುತ್ತಿದ್ದ ಕ್ಷಣವನ್ನು ಲತೀಫ್ ಕ್ಯಾಮೆರಾ ಸೆರೆಹಿಡಿದಿದೆ.

ಮಾನವೀಯ ಪ್ರಪಂಚದ ತಲ್ಲಣದ ಕ್ಷಣಗಳ ದಾಖಲೀಕರಣದ ಮೂಲಕ ವಲಸಿಗರ ಸಂಕಷ್ಟಗಳನ್ನು ಜಗತ್ತಿನ ಮುಂದಿರಿಸಿದ ಸಾರ್ಥಕತೆ ರಾಯಿಟರ್ಸ್ ಬಳಗದ್ದು. ಈ ಬಳಗ, ಬೇರೆ ಬೇರೆ ದೇಶಗಳ, ಹಲವು ಸಂಸ್ಕೃತಿಗಳ ಜನರು ವಲಸೆಯ ಸಂದರ್ಭದಲ್ಲಿ ಎದುರಿಸುತ್ತಿದ್ದ ವಿಭಿನ್ನ ಸನ್ನಿವೇಶಗಳನ್ನು ಚಿತ್ರೀಕರಿಸಿದೆ. ಈ ಚಿತ್ರಪಟಗಳು ಅಂತರರಾಷ್ಟ್ರೀಯ ಸಮುದಾಯದ ಗಮನಸೆಳೆಯುವ ಮೂಲಕ, ವಲಸಿಗರಿಗೆ ನೆರವಾಗುವ ಮನಸ್ಥಿತಿಯೊಂದು ರೂಪುಗೊಂಡಿದ್ದು ರಾಯಿಟರ್ಸ್ ಸಂಸ್ಥೆಯ ಶ್ರಮಕ್ಕೆ ಸಂದ ಸಾರ್ಥಕತೆಯಂತಿದೆ.

ಸುದ್ದಿಗಾರರು ಹಾಗೂ ಸುದ್ದಿಸಂಸ್ಥೆಗಳು ತಮ್ಮ ವಿಶ್ವಾಸಾರ್ಹತೆಯನ್ನು ಕಳೆದುಕೊಳ್ಳುತ್ತಿರುವ ದಿನಗಳಿವು. ಇಂಥ ಸಂದಿಗ್ಧ ಸಂದರ್ಭದಲ್ಲಿ ರಾಯಿಟರ್ಸ್ ಛಾಯಾಗ್ರಾಹಕರ ಸಾಧನೆ ಪತ್ರಿಕೋದ್ಯಮದ ವಿಶ್ವಾಸಾರ್ಹತೆಗೆ ಎಳೆದ ಅಡಿಗೆರೆಯಾಗಿದೆ. ಇಂಥ ಸಾಧನೆ ಸಾಹಸಗಳು ಪತ್ರಿಕೋದ್ಯಮದ ವಿಶ್ವಾಸವನ್ನು ಮಾತ್ರವಲ್ಲ, ಮನುಷ್ಯತ್ವದ ಬಗೆಗಿನ ನಂಬಿಕೆಯನ್ನು ಹೆಚ್ಚಿಸುವಂತಹವು.

ಪ್ರತಿಕ್ರಿಯಿಸಿ: feedback@sudha.co.in

